ಅಸಲು ದಾವಾ ನಂ. 17/2021 ಡಿಡಬ್ಲೂ : 2

ದಿನಾಂಕಃ 25-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿಯ ಪರವಾಗಿಃ ಶ್ರೀ ಎನ್ ಎಮ್ ಎನ್ ವಕೀಲರಿಂದಃ**

20. ಶಾರದಾ ವಿಶ್ವೇಶ್ವರ ಭಟ್ಟ ಗೋಪಿ ಇವರು ಕೊಟ್ಟಿರುವ ಜಿಪಿಎ ನ್ನು ಕುಮಟಾದದಲ್ಲಿ ಸಿದ್ಧಪಡಿಸಲಾಗಿತ್ತು . ಶ್ರೀ ಪಿ ಜಿ ಹೆಚ್ ವಕೀಲರ ಕಚೇರಿಯಲ್ಲಿ ತಯಾರಿಸಲಾಗಿತ್ತು . ವಾದಿ ಹಾಗೂ 1 ನೇ ಪ್ರತಿವಾದಿಯರು ನೀಡಿದ ಜಿಪಿಎ ನ್ನು ಕೂಡ ಶ್ರೀ ಪಿ ಜಿ ಹೆಚ್ ವಕೀಲರ ಕಚೇರಿಯಲ್ಲಿ ತಯಾರಿಸಲಾಗಿತ್ತು . ವಾದಿಯರು, 1 ನೇ ಪ್ರತಿವಾದಿ ಹಾಗೂ ಶಾರದಾ ವಿಶ್ವೇಶ್ವರ ಭಟ್ಟ ಗೋಪಿ ಇವರುಗಳು ನನ್ನ ಸಹೋದರ , ಸಹೋದರಿ , ತಂದೆ ಅಥವಾ ತಾಯಿ ಅಲ್ಲ ಎಂದರೆ ಸರಿ . ಭಾಗ್ಯರೇಖಾ ಅಡಿಮೂಳೆಯವರಿಗೆ ಪ್ರಾಪರ್ಟಿ ನೀಡುವಾಗ ವಿಶ್ವೇಶ್ವರ ಭಟ್ಟ ಗೋಪಿ ಯವರಿಗೆ ಮೊಕ್ತಾರನಾಮೆ ಬರೆದುಕೊಡುವ ಸಮಯದಲ್ಲಿ ಹಣವನ್ನು ನೀಡಿದ್ದೇನೆ ಎಂದು ಕ್ರಯದಸ್ತು ನಿಪಿ -1 ರಲ್ಲಿ ಬರೆಸಿರುವುದು ನಿಜನಾ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿದಿರುತ್ತಾರೆ . ಸುಕ್ರು ಕಾರೆ ಗೌಡಾ , ಸುಬ್ಬು ಕಾರೆ ಗೌಡಾ , ವೆಂಕಟ್ರಮಣ ಕಾರೆ ಗೌಡಾ ಇವರಿಗೂ ಕೂಡ ಮೊಕ್ತಾರನಾಮೆ ಬರೆದುಕೊಡುವ ಸಮಯದಲ್ಲಿ ಹಣವನ್ನು ನೀಡಿದ್ದೇನೆ ಎಂದು ಕ್ರಯಪತ್ರದಲ್ಲಿ ಬರೆದಿರುವುದು ನಿಜವೇ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿದಿರುತ್ತಾರೆ . ನಾಗಪ್ಪ ಗೋಯ್ದು ಗೌಡಾ ಇವರಿಗೂ ಕೂಡ ಮೊಕ್ತಾರನಾಮೆ ಬರೆದುಕೊಡುವ ಸಮಯದಲ್ಲಿ ಹಣವನ್ನು ನೀಡಿದ್ದೇನೆ ಎಂದು ಕ್ರಯಪತ್ರದಲ್ಲಿ ಬರೆದಿರುವುದು ನಿಜವೇ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿದಿರುತ್ತಾರೆ . ನಿಪಿ-5 ಗಣಪತಿ ಮಹಾಬಳೇಶ್ವರ ಗೌಡಾ ಇವರಿಗೂ ಕೂಡ ಮೊಕ್ತಾರನಾಮೆ ಬರೆದುಕೊಡುವ ಸಮಯದಲ್ಲಿ ಹಣವನ್ನು ನೀಡಿದ್ದೇನೆ ಎಂದು ಕ್ರಯಪತ್ರದಲ್ಲಿ ಬರೆದಿರುವುದು ನಿಜವೇ ಎಂದರೆ ಸಾಕ್ಷಿ ಈಗ ನೆನಪಿಲ್ಲ ಎಂದು ನುಡಿದಿರುತ್ತಾರೆ . ನಿಪಿ-6 ದಿಲೀಪ ಉಮಾಮಹೇಶ್ವರ ನಾಯಕ ರವರಿಗೂ ಕೂಡ ಮೊಕ್ತಾರನಾಮೆ ಬರೆದುಕೊಡುವ ಸಮಯದಲ್ಲಿ ಹಣವನ್ನು ನೀಡಿದ್ದೇನೆ ಎಂದು ಕ್ರಯಪತ್ರದಲ್ಲಿ ಬರೆದಿರುವುದು ನಿಜವೇ ಎಂದರೆ ಸಾಕ್ಷಿ ಈಗ ನೆನಪಿಲ್ಲ ಎಂದು ನುಡಿದಿರುತ್ತಾರೆ . ನಿಪಿ-7 ನಾಗೇಶ ಗಣೇಶ ಸೂರಿ ಇವರಿಗೂ ಕೂಡ

ಮೊಕ್ತಾರನಾಮೆ ಬರೆದುಕೊಡುವ ಸಮಯದಲ್ಲಿ ಹಣವನ್ನು ನೀಡಿದ್ದೇನೆ ಎಂದು ಕ್ರಯಪತ್ರದಲ್ಲಿ ಬರೆದಿರುವುದು ನಿಜವೇ ಎಂದರೆ ಸಾಕ್ಷಿ ಈಗ ನೆನಪಿಲ್ಲ ಎಂದು ನುಡಿದಿರುತ್ತಾರೆ . ಮೇಲ್ಕಂಡ ಎಲ್ಲಾ ವ್ಯಕ್ತಿಗಳ ಮೊಕ್ತಾರನಾಮೆ ಸಿದ್ಧಪಡಿಸುವ ಸಂದರ್ಭದಲ್ಲಿ ಕ್ರಯಕ್ಕೆ ನೀಡುವ ವಿಚಾರ ನಿಗದಿಯಾಗಿತ್ತಾ ಎಂದರೆ ಸಾಕ್ಷಿ ನಿಗದಿಯಾಗಿರಲಿಲ್ಲ ಎಂದು ನುಡಿದಿರುತ್ತಾರೆ . ಕ್ರಯ ದಸ್ತಾವೇಜಿನಲ್ಲಿ ಮೊಕ್ತಾರನಾಮೆ ಬರೆದುಕೊಡುವ ಕಾಲದಲ್ಲಿ ಸಂಪೂರ್ಣ ರಕಂ ಬಂದಿರುತ್ತದೆ ಎಂದು ಬರೆಸಿರುವುದನ್ನು ಮೊಕ್ತಾರನಾಮೆಯಲ್ಲಿ ಬರೆಸಲು ತೊಂದರೆ ಇರಲಿಲ್ಲ ಎಂದರೆ ನೆನಪಿಲ್ಲ. ಮೊಕ್ತಾರನಾಮೆ ಪಡೆಯುವ ಸಮಯದಲ್ಲಿ ಶಾರದಾ ವಿಶ್ವೇಶ್ವರ ಭಟ್ಟ ಗೋಪಿ ಹಾಗೂ ವಾದಿಯರಿಗೆ ಮತ್ತು 1 ನೇ ಪ್ರತಿವಾದಿಗೆ ಹಣವನ್ನು ಸಂದಾಯ ಮಾಡಿದ್ದೀರಾ ಎಂದರೆ ಸಾಕ್ಷಿ ಹಣ ಸಂದಾಯಮಾಡಿಲ್ಲ ಎಂದು ನುಡಿದಿರುತ್ತಾರೆ . 1 ರಿಂದ 3 ನೇ ವಾದಿಯರಾಗಲೀ ಅಥವಾ 1 ನೇ ಪ್ರತಿವಾದಿಯಾಗಲೀ ಅಥವಾ ಶಾರದಾ ವಿಶ್ವೇಶ್ವರ ಭಟ್ಟ ಗೋಪಿಯವರು ಜಮೀನನ್ನು ಮಾರಾಟ ಮಾಡುವ ಉದ್ದೇಶಕ್ಕಾಗಿ ನನಗೆ ಮೊಕ್ತಾರನಾಮೆ ನೀಡಿರಲಿಲ್ಲ , ಜಾಗದ ಅಭಿವೃದ್ಧಿಗೋಸ್ಕರ ಮೊಕ್ತಾರನಾಮೆಯನ್ನು ನೀಡಿದ್ದನ್ನು ದುರುಪಯೋಗ ಪಡಿಸಿಕೊಂಡು ಮಾರಾಟ ಮಾಡಿದ್ದೀರಿ ಎಂದರೆ ಸಾಕ್ಷಿ ಅಭಿವೃದ್ಧಿ ಹಾಗೂ ಮಾರಾಟ ಎರಡಕ್ಕೂ ಮೊಕ್ತಾರನಾಮೆ ನೀಡಿದ್ದರು ಎಂದು ನುಡಿದಿರುತ್ತಾರೆ . ನಾನು ದಾವಾ ಅ ಪರಿಶಿಷ್ಟದ ಪೈಕಿ ಕ್ಷೇತ್ರ ಹಾಗೂ ಬ ಪರಿಶಿಷ್ಟ ಆಸ್ತಿಯನ್ನು ಮಾರಾಟ ಮಾಡಿರುವುದು ವಾದಿಯರಿಗೆ ತಿಳಿದಿರಲಿಲ್ಲ ಎಂದರೆ ಸರಿಯಲ್ಲ . ದಾವಾ ಸ್ವತ್ತನ್ನು ಅ ಪರಿಶಿಷ್ಟ ಕ್ಷೇತ್ರ ಮತ್ತು ಬ ಪರಿಶಿಷ್ಟ ಕ್ಷೇತ್ರವನ್ನು ವಾದಿಯರಿಗೆ ತಿಳುವಳಿಕೆ ಇಲ್ಲದೇ ಮಾರಾಟ ಮಾಡಿ ಹಣವನ್ನು ನಾನೇ ಪಡೆದಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ : ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.